VIJAYAKUMAR KANNUR
Digitally signed by VIJAYAKUMAR KANNUR
Date: 2025.11.06 17:07:55 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 06.11.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿರ 2, 3 ಮತ್ತು 5 ರಿಂದ 13 ರವರ ಪರ ಶ್ರೀ ಎ ಎಸ್ ವಾಯ್ ವಕೀಲರಿಂದ :**

ಪ್ರತಿವಾದಿ 1 ಮತ್ತು ಆತನ ಸಹೋದರರ ಮಧ್ಯೆ ಕುಟುಂಬದ ಆಸ್ತಿಗಳಲ್ಲಿ ವಾಟ್ನಿಯಾಗಿರುವುದು ಎಂದರೆ ಸರಿಯಲ್ಲ. ಪ್ರತಿವಾದಿ 1 ಮತ್ತು ಆತನ ಸಹೋದರನ ಮಧ್ಯೆ ಪಾಲು ವಾಟ್ನಿಯಾಗಿದ್ದು, ಆ ಪ್ರಕಾರ ದಾವಾ ಆಸ್ತಿಗಳು ಪ್ರತಿವಾದಿ 1 ರವರ ಪಾಲಿಗೆ ಬಂದಿರುವವು ಎಂದರೆ ಸರಿಯಲ್ಲ. ಈ ದಾವಾ ಆಸ್ತಿಗಳು ಪ್ರತಿವಾದಿ 1 ರವರ ಪಾಲಿಗೆ ಬಂದಿರುವುದರಿಂದ ಅವರೇ ಮಾಲೀಕರು ಎಂದರೆ ಸರಿ. ಪ್ರತಿವಾದಿ 1 ಈಗ ಮೃತ ಪಟ್ಟಿರುವರು. ಪ್ರತಿವಾದಿ 1 ರವರು ತಮ್ಮ ಜೀವಿತ ಕಾಲದಲ್ಲಿ ಸರ್ವೇ ನಂಬರ್ 61/5 ವಿಸ್ತೀರ್ಣ 1 ಎಕರೆ 18 ಗುಂಟೆ ಜಮೀನನ್ನು ಪ್ರತಿವಾದಿ 3 ರವರ ಹೆಸರಿನಲ್ಲಿ ದಿಃ 23.03.2023 ರಂದು ನೊಂದಾಯಿತ ಬಕ್ಷಿಸ್ ಪತ್ರ ಮಾಡಿಕೊಟ್ಟಿರುವರು ಎಂದರೆ ಅದು ಮೋಸದಿಂದ ಮಾಡಿಕೊಂಡಿರುವುದಾಗಿ ಎಂದು ಸಾಕ್ಷಿ ಉತ್ತರಿಸುವರು. ಈ ಬಕ್ಷಿಸ್ ಪತ್ರದ ಪ್ರಕಾರ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಪ್ರತಿವಾದಿ 3 ರವರ ಹೆಸರಿನಲ್ಲಿ ಎಂ. ಆರ್ ನಂ. ಹೆಚ್ 52/22-23 ರ ಪ್ರಕಾರ ಹಕ್ಕು ಬದಲಾವಣೆ ಆಗಿದೆ ಎಂದರೆ ಅದು ಮೋಸದಿಂದ ಮಾಡಿಕೊಂಡಿರುವುದಾಗಿ ಎಂದು ಸಾಕ್ಷಿ ಉತ್ತರಿಸುವರು. ಈ ನೊಂದಾಯಿತ ಬಕ್ಷಿಸ್ ಪತ್ರದ ಪ್ರಕಾರ ಪ್ರತಿವಾದಿ 3 ರವರೇ ಈ ದಾವಾ ಆಸ್ತಿಗೆ ಸಂಪೂರ್ಣ ಮಾಲೀಕರು ಮತ್ತು ಕಬ್ಜೆದಾರರು ಎಂದರೆ ಸರಿಯಲ್ಲ. ಈ ಬಕ್ಷಿಸ್ ಕೊಟ್ಟ ಆಸ್ತಿಯಲ್ಲಿ ಪ್ರತಿವಾದಿ 3 ರವರನ್ನು ಹೊರತು ಪಡಿಸಿ ಉಳಿದ ಪ್ರತಿವಾದಿಯರಿಗೆ ಮತ್ತು ವಾದಿಯರಿಗೆ ಯಾವುದೇ ಹಕ್ಕು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಬಕ್ಷಿಸ್ ಪತ್ರದ ಆಸ್ತಿಯನ್ನು ಹೊರತು ಪಡಿಸಿ ಉಳಿದ ದಾವಾ ಆಸ್ತಿಗಳಲ್ಲಿ ವಾದಿಯರಿಗೆ ಮತ್ತು ಉಳಿದ ಪ್ರತಿವಾದಿಯರಿಗೆ ಹಕ್ಕು ಇರುವುದು ಎಂದರೆ ಸರಿಯಲ್ಲ.

2. ಈ ದಾವೆಯನ್ನು ದಾನ ಪತ್ರವನ್ನು ಮೋಸದಿಂದ ಮಾಡಿಕೊಂಡಿರುವುದು ಗೊತ್ತಾಗಿರುವುದರಿಂದ ಈ ದಾವೆ ದಾಖಲು ಮಾಡಿರುವೆವು. ದಾವಾ ಆಸ್ತಿಗಳ ಸರ್ವೇ ನಂಬರ್ ನನಗೆ ಹೇಳಲು ಬರುವುದಿಲ್ಲ. ದಾವಾ ಜಮೀನುಗಳ ಪ್ರತಿಯೊಂದು ಕ್ಷೇತ್ರ ಮತ್ತು ವಿಸ್ತೀರ್ಣ ನನಗೆ ಹೇಳಲು ಬರುವುದಿಲ್ಲ. ಪ್ರತಿವಾದಿ 3 ರವರ ವಿರುದ್ಧ ಈ ಖೊಟ್ಟಿ ದಾವೆಯನ್ನು ದಾಖಲು ಮಾಡಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ ಬರೆಸಿ ಹಾಕಿರುವ ಸಂಗತಿಗಳು ಎಲ್ಲವೂ ನಿಜವಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿನ ಸಂಗತಿಗಳು ನಿಜವಿರುವುದಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿ 14 ಮತ್ತು ಅವರ ವಕೀಲರನ್ನು ಕೂಗಿಸಲಾಯಿತು, ನ್ಯಾಯಾಲಯದಲ್ಲಿ ಹಾಜರು ಇರದ ಕಾರಣ ಅವರ ಪರವಾಗಿ ಯಾವುದೇ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಇದೆ.

VIJAYAKUMAR KANNUR

Digitally signed by VIJAYAKUMAR KANNUR
Date: 2025.11.06 17:08:00 +0530

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ